ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮಾದಕದ್ರವ್ಯ ಪ್ರಕರಣಗಳ ವಿಶೇಷ ನ್ಯಾಯಾಲಯ, ಕೋಲಾರ

Spl.C.(NDPS) 50/2024

ಪ್ರಾಸಾಃ 1 ಚಾಸಾಃ 2

**ದಿನಾಂಕಃ 12-06-2025**

ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು

ಹೆಸರು :- ಪ್ರೇಮ
ಗಂಡನ ಹೆಸರು :- ಬಾಬು
ವಯಸ್ಸು :- 34 ವರ್ಷ
ಉದ್ಯೋಗ :- ಗ್ರಾಮ ಆಡಳಿತಾಧಿಕಾರಿ, ಪಾರಾಂಡಹಳ್ಳಿ ಪಂಚಾಯಿತಿ
ವಾಸ ಸ್ಥಳ :- ನಾರಾಯಣಪುರ

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಮಾಧವ ಪದ್ಮನಾಭ ಗಾವಂಕರ್ ರವರಿಂದಃ

ನಾನು ಕಳೆದ ನಾಲ್ಕು ವರ್ಷಗಳಿಂದ ನಾನು ಗ್ರಾಮ ಆಡಳಿತಾಧಿಕಾರಿ ಆಗಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕಃ 03-09-2024 ರಂದು ನಮ್ಮ ತಹಸೀಲ್ದಾರ್ ರವರು ನನಗೆ ಮತ್ತು ಗ್ರಾಮ ಸಹಾಯಕರಾದ ಚಾಸಾ-3 ರವರಿಗೆ ಫೋನ್ ಕರೆ ಮಾಡಿ ರಾಬರ್ಟ್‌ಸನ್ ಪೇಟೆ ಪೊಲೀಸ್ ರವರು ಗಾಂಜಾ ದಾಳಿ ಮಾಡಲು ಪಂಚರು ಬೇಕೆಂದು ಕೋರಿದ್ದು ನೀವು ಹೋಗಿ ಎಂದು ತಿಳಿಸಿದರು. ನಾವಿಬ್ಬರೂ ಮಧ್ಯಾಹ್ನ 01-00 ಗಂಟೆಗೆ ಪೊಲೀಸ್ ಠಾಣೆಗೆ ಹೋದೆವು. ಚಾಸಾ-1 ರವರು ತಮಗೆ ಬಂದ ಖಚಿತ ವರ್ತಮಾನವನ್ನು ನಮಗೆ ವಿವರಿಸಿದರು. ಆ ಸಮಯದಲ್ಲಿ ಒಂದು ನೋಟೀಸನ್ನು ನೀಡಿದರು, ಅದನ್ನು ನಿಪಿ-1 ಎಂದು, ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಂತೋಷರವರ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಎರಡು ವಾಹನಗಳಲ್ಲಿ ಪೊಲೀಸರು ನಾವು ಪಾರಾಂಡಹಳ್ಳಿ- ಕ್ಯಾಸಂಬಳ್ಳಿ ಹತ್ತಿರ ಇರುವ ಕ್ರಿಕೇಟ್ ಮೈದಾನದ ಬಳಿ ಹೋದೆವು. ಜೀಪನ್ನು ನಿಲ್ಲಿಸಿ ಒಬ್ಬ ಪೊಲೀಸ್ ಪೇದೆಯನ್ನು ಯಾರಾದರೂ ಇರುವ ಬಗ್ಗೆ ನೋಡಿಕೊಂಡು ಬರುವ ಬಗ್ಗೆ ಚಾಸಾ-1 ರವರು ಹೇಳಿದರು. ಒಬ್ಬ ಪೇದೆ ಮೈದಾನದ ಒಳಗೆ ಹೋಗಿ ಆಸಾಮಿಗಳು ಇದ್ದಾರೆಂದು ಕೈ ಸಃಜ್ಞೆ ಮಾಡಿದರು.

ನಾವೆಲ್ಲರೂ ಹೋಗಿ ನೋಡಲಾಗಿ ಇಬ್ಬರು ಆಸಾಮಿಗಳು ಇದ್ದರು. ಅವರ ಹತ್ತಿರ ಪ್ಲಾಸ್ಟಿಕ್ ಗೋಣೀಚೀಲ ಇತ್ತು. ಆಸಾಮಿಗಳು ನಮ್ಮನ್ನು ನೋಡಿ ಓಡಿದರು, ಅಲ್ಲೇ ಇದ್ದ ಪೊಲೀಸರು ಅವರನ್ನು ಹಿಡಿದುಕೊಂಡು ಬಂದರು. ಚಾಸಾ-1 ರವರು ಅವರಿಬ್ಬರ ಹೆಸರು ವಿಳಾಸ ಪಡೆದುಕೊಂಡರು. ಹತ್ತು ನಿಮಿಷದ ಅಂತರದಲ್ಲಿ ಚಾಸಾ-1 ರವರು ಚಾಸಾ-13 ಪತ್ರಾಂಕಿತ ಅಧಿಕಾರಿಯಾಗಿ ಕರೆಯಿಸಿಕೊಂಡರು. ಆ ಸಮಯದಲ್ಲಿ ಪರಸ್ಪರ ಅಂಗಶೋಧನೆ ಮಾಡಿಕೊಂಡೆವು. ಚಾಸಾ-13 ರವರು ಆರೋಪಿಗಳಿಗೆ ತಾನೇ ಅಂಗಶೋಧನೆ ಮಾಡಬಹುದೇ ಎಂದು ಕೇಳಿದರು. ಆರೋಪಿಗಳು ಅದಕ್ಕೆ ಒಪ್ಪಿಗೆ ನೀಡಿದರು. ಚಾಸಾ-1 ರವರು ಚೀಲವನ್ನು ತೆರೆದು ನೋಡಲಾಗಿ ಒಣ ಮಾದಕ ಸೊಪ್ಪು ಇತ್ತು. ಆರೋಪಿಗಳನ್ನು ವಿಚಾರಿಸಲಾಗಿ ಗಡಿಭಾಗದಿಂದ ಮಾರಾಟ ಮಾಡಲು ತಂದಿದ್ದಾಗಿ ಹೇಳಿದರು. ಚಾಸಾ-1 ರವರು ತೂಕ ಮಾಡಿಸಲಾಗಿ 6 ಕೆಜಿ ಗಾಂಜಾ ಇತ್ತು. ಅದನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ, ಎಂಎಸ್ ಎಂಬ ಸೀಲ್ ಹಾಕಿದರು. ನಂತರ ಸ್ಥಳದಲ್ಲಿ ಪಂಚನಾಮೆ ಮಾಡಿದರು. ಅದನ್ನು ನಿಪಿ-2 ಎಂದು, ನಿಪಿ-2(ಎ) ನನ್ನ ಸಹಿ. ಚಾಸಾ-3 ರವರ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ 4 ಫೋಟೋಗಳನ್ನು ತೆಗೆದರು. ಅವುಗಳನ್ನುಒಟ್ಟಾಗಿ ನಿಪಿ-3 ಎಂದು ಗುರುತಿಸಲಾಯಿತು. ಮಧ್ಯಾಹ್ನ 01-30 ರಿಂದ 03-30 ವರಿಗೂ ಪಂಚನಾಮೆ ಮಾಡಿದರು. ಆರೋಪಿಗಳನ್ನು ನೋಡಿ ಗುರುತಿಸಿದ್ದೇನೆ. ಆ ದಿನ ಮುದ್ರೆಯನ್ನು ನನ್ನ ಕೈಗೆ ಕೊಟ್ಟಿದ್ದಾರೆ. ಈ ದಿನ ಅದನ್ನು ತರುವುದು ಮರೆತಿದ್ದೇನೆ. ಮುಂದಿನ ಸುನಾವಣೆಗೆ ಹಾಜರು ಪಡಿಸುತ್ತೇನೆ. ಆ ದಿನ ಮುದ್ರೆ ಪಡೆದ ಬಗ್ಗೆ ನೀಡಿದ ಸ್ವೀಕೃತಿಯನ್ನು ನಿಪಿ-4 ಎಂದು, ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು. ಮುಂದೂಡಿದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

**(ಮಂಜುನಾಥ ಜಿ.ಎ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ.**